ಶ್ರೀ ಅಧ್ಯಕ್ಷರು.— ಎಷ್ಟು ವರ್ಷಕ್ಕೊಂದು ಸಲ ಅದನ್ನು ನೀವು ಕರೆಯುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್.— ವರ್ಷಕ್ಕೆರಡು ಸಲ.

ಅಧ್ಯಕ್ಷರು.— ಹಾಗಾದರೆ ಈ ಸಲ ಮತ್ತೆ ಕರೆಯಿರಿ, ಅವರ ಜೊತೆ ಮಾತನಾಡಿ ಏನಾಯಿತು ಎಂದು ಇವರಿಗೆ ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.— ಮೊನ್ನೆ ತಾನೇ ಕರೆದಿದ್ದೀನಲ್ಲ ಸ್ವಾಮಿ, ಅಲ್ಲದೆ ಇವರ್ಯಾರೂ ಆದರಲ್ಲಿ ಇರುವುದಿಲ್ಲವಲ್ಲ, ಆಯಿತು, ಶ್ರೀ ವಸಂತ ವಿ. ಸಾಲಿಯಾನ್ ಅವರು ಹೇಳಿದ್ದರ ಬಗ್ಗೆ ನೋಡಿ ಸುತ್ತೇನೆ. ಆ ತರಹ ಏನಾದರೂ ಇದ್ದರೆ ಆದ್ಯತೆ ಮೇಲೆ ಇದಕ್ಕೆ ಪರಿಹಾರವನ್ನು ಕಂಡು ಹಿಡಿಯುತ್ತೇನೆ.

ನಿಯಮ ೩೩೪ರ ಮೇರೆಗೆ

೧) ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯವರಿಂದ ಮುಷ್ಕರ

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರು ತಮ್ಮನ್ನು ವಿದ್ಯಾರ್ಥಿನಿಲಯದಲ್ಲಿ ದಿನಗಳ ತರಹ ರೂಮಿನಲ್ಲಿ ಒಂದು ರೂಮಿಗೆ ಏಳೆಂಟು ಹುಡಿಗಿಯರನ್ನು ಕೂಡುಹಾಕಿ ಅವರಿಗೆ ಕುರ್ಚಿಯಲು ನೀರು, ವಿದ್ಯುಚ್ಛಕ್ತಿಯನ್ನು ಕೂಡ ಕೊಡದೆ ಟೇಬಲ್, ಚೇರ್, ಮಂಚ ಕೊಡದೆ ಫೀಜು ಮಾತ್ರ ಮಾಹೆಯಾನ ೨೮೦ ರೂಪಾಯಿಗಳನ್ನು ವಸೂಲು ಮಾಡುತ್ತಾ ವಿದ್ಯಾರ್ಥಿನಿಯರ ಬಗ್ಗೆ ಅಮಾನುಷವಾಗಿ ವರ್ತಿಸುತ್ತಿರುವ ನೀತಿಯನ್ನು ಪ್ರತಿಭಟಿಸಿ ಚಳುವಳಿ ನಡೆಸಿ ತರಗತಿಗಳಿಗೆ ಬಹಿಷ್ಕಾರ ಹಾಕಿ ಹೋರಾಟದ ಹಾದಿಗೆ ಇಳಿದರೂ ವಿಶ್ವವಿದ್ಯಾನಿಲಯ ಯಾವ ಕ್ರಮವನ್ನೂ ಕೈಗೊಳ್ಳದೆ ನಿರ್ಲಕ್ಷ್ಯ ಮನೋಭಾವವನ್ನು ತೋರುತ್ತಿರುವ ಬಗ್ಗೆ ನಾನು ಪ್ರತಿಭಟಿಸಿ ಮಾನ್ಯ ವ್ಯವಸಾಯ ಮಂತ್ರಿಗಳು ಇದರ ಬಗ್ಗೆ ಕ್ರಮ ಕೈಗೊಂಡು ಸೂಕ್ತ ಪರಿಹಾರ ಕೊಡಬೇಕೆಂದು ಕೋರಿ ಮಾನ್ಯ ಮಂತ್ರಿಗಳ ಹೇಳಿಕೆಗಾಗಿ ಕೋರುತ್ತೇನೆ.

ಶ್ರೀ ಆರ್. ದೇವಪ್ಪಾಂಡೆ (ಕೃಷಿ ಸಚಿವರು).—ಅಧ್ಯಕ್ಷರೇ, ೧೨-೫-೮೮ನೇ ದಿನ ಈ ಘಟನೆಯಾದದ್ದು ನಿಜ. ಅದರ ನಂತರ ನಮ್ಮ ವೈಸ್‌ಚಾನ್ಸಲರ್ ಮತ್ತು ಹಿರಿಯ ಅಧಿಕಾರಿಗಳು ಲೀಡರ್ಸ್ ಮತ್ತು ಲೀಡಿಸ್ ರೆಪ್ರೆಸೆಂಟೆಟೀವ್ಸ್ ಜತೆ ಮಾತನಾಡಿ ಅವರ ಸಮಸ್ಯೆ ಬಗೆಹರಿಸಿದ್ದಾರೆ. ಇಲ್ಲಿ ಏನಾಗಿತ್ತು ಎಂದರೆ ಕೇವಲ ಒಟ್ ಗರ್ಲ್ಸ್‌ಗೆ ಇದ್ದ ಆಕಾಮಡೇಷನ್‌ನಲ್ಲಿ ಕಳೆದರೆಡು ವರ್ಷದಲ್ಲಿ ಅಡ್ಮಿಷನ್ಸ್ ಜಾಸ್ತಿ ಆಗಿ ೧೬೦ಕ್ಕೆ ಏರಿತ್ತು. ಈಗ ನಾವು ಹಾಸ್ಟೆಲ್ ಮತ್ತು ಆಫೀಸಿಯಲ್ ಕ್ವಾರ್ಟ್ರಸ್ ಏನಿವೆ, ಅವನ್ನೆಲ್ಲ ಇವರಿಗೆ ಆಕಾಮಡೇಟ್ ಮಾಡಿಕೊಡುತ್ತಿದ್ದೇವೆ. ನೀರಿನ ಪ್ರಾಬ್ಲಂ ಆ ದಿವಸ ಇತ್ತು. ಏಕೆಂದರೆ ಬಿಡಬ್ಲ್ಯುಎಸ್‌ಎಸ್‌ಬಿ ಯವರು ನೀರನ್ನು ನಿಲ್ಲಿಸಿದ್ದರಿಂದ ಮತ್ತು ಬೋರ್‌ವೆಲ್ ಕೈಕೊಟ್ಟಿದ್ದರಿಂದ ಪ್ರಾಬ್ಲಮ್ ಆಗಿತ್ತು. ಈಗ ಅವನ್ನು ಪರಿಹರಿಸಿದ್ದೇವೆ.

೨) ರಾಜ್ಯದಲ್ಲಿ ನಿಜವಾದ ರೈತರಿಗೆ ಭೂಮಿಯ ಹಕ್ಕನ್ನು ಕೊಡುವುದು ಮತ್ತು ಭೂಮಿ ಕಳೆದುಕೊಂಡವರಿಗೆ ಪರಿಹಾರವನ್ನು ಜಾಗ್ರತೆ ಕೊಡುವುದು

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಉಳುವ ಒಕ್ಕಲಿಗೆ ಭೂಮಿಯ ಹಕ್ಕು ಕೊಡುವುದು, ಭೂಮಿಯ ಒಡೆತನ ಕಳೆದುಕೊಂಡವರಿಗೆ ಪರಿಹಾರ ನೀಡುವುದು ಇವು ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಮೂಲ ಉದ್ದೇಶ. ಈ ಕೆಲಸ ಹೆಚ್ಚಿನ ಕಡೆ ಆಗಿದೆ. ಕೆಲವು ಕಡೆ ತನಿಸಿ ಮರು ತನಿಖೆ ನಡೆಯುತ್ತಿದೆ ಆದರೆ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಮಲ್ಲೂರು ಗ್ರಾಮದ ಸರ್ವೆ ನಂ. ೧೦೫ ಮತ್ತು ೧೦೬ ಕ್ಕೆ ಹಕ್ಕು ಪಡೆಯಲು ಅರ್ಜಿ ಸಲ್ಲಿಸಿದ ಐದು ಮಂದಿ ಒಕ್ಕಲುಗಳ ಪ್ರಕರಣ ತನಿಖೆ ಆಗದೆ ಚನ್ನಪಟ್ಟಣ ಭೂನ್ಯಾಯಮಂಡಳಿಯಲ್ಲಿ ೧೯೭೬ ರಲ್ಲಿ ಫೈಲ್ ಆಗಿರುವುದಾಗಿ ತಿಳಿದುಬಂದಿದೆ. ಇದರಿಂದ ನಿಜವಾಗಿ ಒಕ್ಕಲಾಗಿ ಭೂಸ್ವಾಧೀನ ಹೊಂದಿದ್ದ ಇವರಿಗೆ ಭೂಮಿಯ ಹಕ್ಕಿಲ್ಲ, ಭೂಮಿ ಕಳೆದುಕೊಂಡ, ದೇಣಿ ಪಡೆಯುವ ಧನಿಗೆ ಪರಿಹಾರವೂ ಇಲ್ಲ